**ಕರ್ನಾಟಕ ಸರ್ಕಾರ**

ಸಂಖ್ಯೆ:STI-ADMNOESTB/21/2023

ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆ
8ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560001, ದಿನಾಂಕ:23.03.2023.

# ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯ ಹಾಗೂ ಸರ್ಕಾರದ ವಿವಿಧ ಕ್ಷೇತ್ರ ಇಲಾಖೆಗಳ ಅಧಿಕಾರಿ/ನೌಕರರಿಗೆ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸುವ ಕುರಿತು ತರಬೇತಿ ಕಾರ್ಯಕ್ರಮ.

ಉಲ್ಲೇಖ: 1. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1) ರವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 61 ಸೇನೆನಿ 2023, ದಿನಾಂಕ: 06.03.2023.
2. ಕಡತ ಸಂಖ್ಯೆ:DPARAR/3/KTP/2023.

****

ಸರ್ಕಾರದ ಹಲವಾರು ಇಲಾಖೆಗಳು ಪ್ರಕಟಿಸುತ್ತಿರುವ ವಿವಿಧ ವೃಂದಗಳ ಜೇಷ್ಠತಾ ಪಟ್ಟಿಗಳು ದೋಷಪೂರ್ಣವಾಗಿದ್ದು, ಅವು ನ್ಯಾಯಾಲಯಗಳಲ್ಲಿ ಪ್ರಶ್ನಿಸಲ್ಪಡುತ್ತಿದ್ದು, ಇದರಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಕಾಲದಲ್ಲಿ ಬಡ್ತಿಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ, ಇಲಾಖೆಗಳ ಸಮಯ ಹಾಗೂ ಸಂಪನ್ಮೂಲಗಳ ವ್ಯಯವಾಗುತ್ತಿರುವುದನ್ನು ಸರ್ಕಾರ ಗಮನಿಸಿದ್ದು, ಈ ಸಂಬಂಧ ಸಚಿವಾಲಯ ಹಾಗೂ ಕ್ಷೇತ್ರ ಇಲಾಖೆಗಳಲ್ಲಿ ಸೇವಾ ವಿಷಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸುವ ಹಾಗೂ ಜೇಷ್ಠತಾ ನಿಯಮಗಳಿಗೆ ಸಂಬಂಧಿತ ವಿಷಯಗಳಲ್ಲಿ ಸಚಿವಾಲಯ ತರಬೇತಿ ಸಂಸ್ಥೆಯಿಂದ ಸೂಕ್ತ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲು ಯೋಜಿಸಿದೆ.

ಈ ಹಿನ್ನೆಲೆಯಲ್ಲಿ, **ಸಚಿವಾಲಯ ಹಾಗೂ ಕ್ಷೇತ್ರ ಇಲಾಖೆಗಳಲ್ಲಿ ಸೇವಾ ವಿಷಯಗಳನ್ನು ಅದರಲ್ಲೂ ವಿಶೇಷವಾಗಿ ಜೇಷ್ಠತಾ ವಿಷಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಜೇಷ್ಠತಾ ಪಟ್ಟಿ ತಯಾರಿಸುವ ಮತ್ತು ಜೇಷ್ಠತಾ ನಿಯಮಗಳ ಕುರಿತಂತೆ ದಿನಾಂಕ: 11.04.2023 ರಿಂದ 13.04.2023ರವರೆಗೆ** (ಒಂದು ದಿನದಲ್ಲಿ- ಪೂರ್ವಾಹ್ನ10.30 ರಿಂದ 1.00 ರವರೆಗೆ ಮತ್ತು ಅಪರಾಹ್ನ 2.30 ರಿಂದ 5.00 ರವರೆಗೆ ಎರಡು ಅಧಿವೇಶನಗಳಂತೆ ಮೂರು ದಿನಗಳಲ್ಲಿ ಆರು ತಂಡಗಳಲ್ಲಿ) **ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆಯ ವಿ.ವಿ. ಚಿಕ್ಕಗೋಪುರದ 4ನೇ ಮಹಡಿ, ಡಾ. ಅಂಬೇಡ್ಕರ ವೀದಿ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.**

ಉದ್ದೇಶಿತ ತರಬೇತಿ ಕಾರ್ಯಕ್ರಮದ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ತರಬೇತಿ ಕಾರ್ಯಕ್ರಮಕ್ಕೆ ಸಚಿವಾಲಯ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿ /ಸಿಬ್ಬಂದಿಗಳು (ಪಟ್ಟಿಯಲ್ಲಿ ತಿಳಿಸಲಾಗಿರುವ ಸಂಖ್ಯೆಗೆ ಮೀರದಂತೆ) ತಮ್ಮ ಇಲಾಖೆಯ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳ ಅಧಿಕಾರಿ / ಸಿಬ್ಬಂದಿಗಳೊಂದಿಗೆ ನಿಗದಿತ ದಿನಾಂಕದಂದು ಕಡ್ಡಾಯವಾಗಿ ಹಾಜರಾಗಲು ಸೂಚಿಸುವಂತೆ ಕೋರಿದೆ. ಸದರಿ ತರಬೇತಿ ಕಾರ್ಯಕ್ರಮಕ್ಕೆ ನಿಯೋಜಿಸಬೇಕಾದ ಸಚಿವಾಲಯದ ಮತ್ತು ಕ್ಷೇತ್ರ ಇಲಾಖೆಗಳ ಅಧಿಕಾರಿ:ನೌಕರರನ್ನು ಸಚಿವಾಲಯದ ಸಂಬಂಧಪಟ್ಟ ಆಡಳಿತ ಇಲಾಖೆಗಳೇ ನಿರ್ಧರಿಸತಕ್ಕದ್ದು.

ಇದೊಂದು ಮಹತ್ವದ ತರಬೇತಿ ಕಾರ್ಯಕ್ರಮವಾಗಿದ್ದು ಸದರಿ ತರಬೇತಿಗೆ ಕಾರ್ಯಕ್ರಮದ ಪಟ್ಟಿಯಲ್ಲಿ ತಿಳಿಸಲಾಗಿರುವಂತೆ ಸರ್ಕಾರದ ಎಲ್ಲಾ ಇಲಾಖೆಗಳಿಂದ ಕಡ್ಡಾಯವಾಗಿ ಅಧಿಕಾರಿ:ನೌಕರರನ್ನು ನಿಯೋಜಿಸುವಂತೆ ಸೂಚಿಸಲಾಗಿದೆ.

Hemalatha P

**(ಪಿ.ಹೇಮಲತ)**
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು (ಅಗತ್ಯ ಕ್ರಮಕ್ಕಾಗಿ).
2. ಇಲಾಖಾ ಮುಖ್ಯಸ್ಥರುಗಳು (ಅಗತ್ಯ ಕ್ರಮಕ್ಕಾಗಿ, ಸಂಬಂಧಪಟ್ಟ ಸಚಿವಾಲಯದ ಆಡಳಿತ ಇಲಾಖೆಗಳ ಮುಖಾಂತರ)

# <u>ತರಬೇತಿ ಕಾರ್ಯಕ್ರಮದ ವೇಳಾಪಟ್ಟಿ</u>

| ತಂಡ | ದಿನಾಂಕ ಮತ್ತು ಅಧಿವೇಶನ | ಪಾಲ್ಗೊಳ್ಳಬೇಕಾದ ಇಲಾಖೆಗಳು ಹಾಗೂ ಭಾಗವಹಿಸಬೇಕಾದ ಅಧಿಕಾರಿ/ನೌಕರರ ಸಂಖ್ಯೆ |
|---|---|---|
| 1. | **ದಿನಾಂಕ:11.04.2023 (ಮಂಗಳವಾರ)**<br>ಪೂರ್ವಾಹ್ನದ ಅಧಿವೇಶನ (10.30 ರಿಂದ 1.00 ರವರೆಗೆ) | 1. **ಕರ್ನಾಟಕ ಸರ್ಕಾರ ಸಚಿವಾಲಯ**: (ಸೇವೆಗಳು ವಿಭಾಗ:4) (ಸಿಬ್ಬಂದಿ:2) (ಆಡಳಿತ ವಿಭಾಗ:4)<br>2. **ಲೋಕೋಪಯೋಗಿ ಇಲಾಖೆ**: (ಲೋಕೋಪಯೋಗಿ ಸಚಿವಾಲಯ:4) (ಕ್ಷೇತ್ರ ಇಲಾಖೆಗಳು:6)<br>3. **ಜಲ ಸಂಪನ್ಮೂಲ ಇಲಾಖೆ:**(ಜಲಸಂಪನ್ಮೂಲ ಸಚಿವಾಲಯ:2) (ಕ್ಷೇತ್ರ ಇಲಾಖೆ:4)<br>4. **ಸಣ್ಣ ನೀರಾವರಿ ಇಲಾಖೆ**:(ಸಣ್ಣ ನೀರಾವರಿ ಸಚಿವಾಲಯ:2) (ಕ್ಷೇತ್ರ ಇಲಾಖೆ:2) |
| 2. | **ದಿನಾಂಕ:11.04.2023 (ಮಂಗಳವಾರ)**<br>ಅಪರಾಹ್ನದ ಅಧಿವೇಶನ (2.30 ರಿಂದ 5.00 ರವರೆಗೆ) | 1. **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ:** (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವಾಲಯ:4) (ಕ್ಷೇತ್ರ ಇಲಾಖೆ:8)<br>2. **ಉನ್ನತ ಶಿಕ್ಷಣ ಇಲಾಖೆ:**(ಉನ್ನತ ಶಿಕ್ಷಣ ಸಚಿವಾಲಯ 4)(ಕ್ಷೇತ್ರ ಇಲಾಖೆಗಳು:8)<br>3. **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:**(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ:4)( ಕ್ಷೇತ್ರ ಇಲಾಖೆಗಳು:8)<br>4. **ಆಹಾರ ಇಲಾಖೆ:**(ಆಹಾರ ಸಚಿವಾಲಯ:2) (ಕ್ಷೇತ್ರ ಇಲಾಖೆಗಳು:4) |
| 3. | **ದಿನಾಂಕ:12.04.2023 (ಬುಧವಾರ)**<br>ಪೂರ್ವಾಹ್ನದ ಅಧಿವೇಶನ (10.30 ರಿಂದ 1.00 ರವರೆಗೆ) | 1. **ಕಂದಾಯ ಇಲಾಖೆ:** (ಕಂದಾಯ ಸಚಿವಾಲಯ:6) (ಕ್ಷೇತ್ರ ಇಲಾಖೆಗಳು:10)<br>2. **ಸಮಾಜ ಕಲ್ಯಾಣ ಇಲಾಖೆ:** (ಸಮಾಜ ಕಲ್ಯಾಣ ಸಚಿವಾಲಯ:4) (ಕ್ಷೇತ್ರ ಇಲಾಖೆಗಳು:8)<br>3. **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:** (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವಾಲಯ:2) (ಕ್ಷೇತ್ರ ಲಾಖೆಗಳು:2)<br>4. **ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ**: (ಅಲ್ಪ ಸಂಖ್ಯಾತರ ಕಲ್ಯಾಣ ಸಚಿವಾಲಯ:2) (ಕ್ಷೇತ್ರ ಇಲಾಖೆ:2)<br>5. **ಕೌಶಲ್ಯಾಭಿ ವ್ವೃದ್ಧಿ ಇಲಾಖೆ**: (ಕೌಶಲ್ಯಾಭಿವ್ವೃದ್ಧಿ ಸಚಿವಾಲಯ:2) (ಕ್ಷೇತ್ರ ಇಲಾಖೆ:2) |
| 4. | **ದಿನಾಂಕ:12.04.2023 (ಬುಧವಾರ)** | 1. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** (ಆರೋಗ್ಯ ಮತ್ತು ಕುಟುಂಬ ಕಲ್ಯಾಣ |

| | | |
|---|---|---|
| | ಅಪರಾಹ್ನದ ಅಧಿವೇಶನ<br>(2.30 ರಿಂದ 5.00 ರವರೆಗೆ) | ಸಚಿವಾಲಯ:4)(ಕ್ಷೇತ್ರ ಇಲಾಖೆಗಳು:6)<br>2. **ವೈದ್ಯಕೀಯ ಶಿಕ್ಷಣ ಇಲಾಖೆ:** (ವೈದ್ಯಕೀಯ ಶಿಕ್ಷಣ ಸಚಿವಾಲಯ:2 (ಕ್ಷೇತ್ರ ಇಲಾಖೆ: 3)<br>3. **ಒಳಾಡಳಿತ ಇಲಾಖೆ:** (ಒಳಾಡಳಿತ ಸಚಿವಾಲಯ:4) (ಕ್ಷೇತ್ರ ಇಲಾಖೆಗಳು:8)<br>4. **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ:3) (ಕ್ಷೇತ್ರ ಇಲಾಖೆಗಳು:4)<br>5. **ಕಾರ್ಮಿಕ ಇಲಾಖೆ:** (ಕಾರ್ಮಿಕ ಸಚಿವಾಲಯ:2) (ಕ್ಷೇತ್ರ ಇಲಾಖೆ:2) |
| 5. | **ದಿನಾಂಕ:13.04.2023 (ಗುರುವಾರ)**<br>ಪೂರ್ವಾಹ್ನದ ಅಧಿವೇಶನ<br>(10.30 ರಿಂದ 1.00 ರವರೆಗೆ) | 1. **ಆರ್ಥಿಕ ಇಲಾಖೆ:** (ಆರ್ಥಿಕ ಸಚಿವಾಲಯ:3) (ಕ್ಷೇತ್ರ ಇಲಾಖೆಗಳು:6)<br>2. **ಅರಣ್ಯ ಇಲಾಖೆ:** (ಅರಣ್ಯ ಸಚಿವಾಲಯ: 2)(ಕ್ಷೇತ್ರ ಇಲಾಖೆಗಳು:4)<br>3. **ಕೃಷಿ ಇಲಾಖೆ**: (ಕೃಷಿ ಸಚಿವಾಲಯ:3) (ಕ್ಷೇತ್ರ ಇಲಾಖೆ:4)<br>4. **ತೋಟಗಾರಿಕೆ ಇಲಾಖೆ:** (ತೋಟಗಾರಿಕೆ ಸಚಿವಾಲಯ:2) (ಕ್ಷೇತ್ರ ಇಲಾಖೆ:2)<br>5. **ಪಶು ಸಂಗೋಪನೆ ಇಲಾಖೆ**: (ಪಶು ಸಂಗೋಪನೆ ಸಚಿವಾಲಯ:1) (ಕ್ಷೇತ್ರ ಇಲಾಖೆ:2)<br>6. **ಸಾರಿಗೆ ಇಲಾಖೆ**: ಸಾರಿಗೆ ಸಚಿವಾಲಯ:2) (ಕ್ಷೇತ್ರ ಇಲಾಖೆಗಳು:2)<br>7. **ವಸತಿ ಇಲಾಖೆ**: (ವಸತಿ ಸಚಿವಾಲಯ:2) (ಕ್ಷೇತ್ರ ಇಲಾಖೆ:2)<br>8. **ಮೂಲ ಸೌಲಭ್ಯ ಇಲಾಖೆ**: (ಮೂಲ ಸೌಲಭ್ಯ ಸಚಿವಾಲಯ:1) (ಕ್ಷೇತ್ರ ಇಲಾಖೆ 1)<br>9. **ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ**: (ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ:2) (ಕ್ಷೇತ್ರ ಇಲಾಖೆ:2)<br>10. **ನಗರಾಭಿವೃದ್ಧಿ ಇಲಾಖೆ**: (ನಗರಾಭಿವೃದ್ಧಿ ಸಚಿವಾಲಯ:2) (ಕ್ಷೇತ್ರ ಇಲಾಖೆ:4) |
| 6. | **ದಿನಾಂಕ:13.04.2023 (ಗುರುವಾರ)**<br>ಅಪರಾಹ್ನದ ಅಧಿವೇಶನ<br>(2.30 ರಿಂದ 5.00 ರವರೆಗೆ) | 1. **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**: (ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯ 1) (ಕ್ಷೇತ್ರ ಇಲಾಖೆ:3)<br>2. **ಯುವಜನ ಸೇವಾ ಇಲಾಖೆ**: (ಯುವಜನ ಸೇವಾ ಸಚಿವಾಲಯ:1) (ಕ್ಷೇತ್ರ ಇಲಾಖೆ:2)<br>3. **ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ:** (ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ:1) (ಕ್ಷೇತ್ರ ಇಲಾಖೆ:1)<br>4. **ಯೋಜನಾ ಇಲಾಖೆ**: (ಯೋಜನಾ |

| | | |
|---|---|---|
| | | ಸಚಿವಾಲಯ:2) (ಕ್ಷೇತ್ರ ಇಲಾಖೆಗಳು:4)<br>5. **ಇಂಧನ ಇಲಾಖೆ**: (ಇಂಧನ ಸಚಿವಾಲಯ:1) (ಕ್ಷೇತ್ರ ಇಲಾಖೆ:1)<br>6. **ಸಹಕಾರ ಇಲಾಖೆ**: (ಸಹಕಾರ ಸಚಿವಾಲಯ:2) (ಕ್ಷೇತ್ರ ಇಲಾಖೆ:4)<br>7. **ಕಾನೂನು ಇಲಾಖೆ**: (ಕಾನೂನು ಸಚಿವಾಲಯ:1) (ಕ್ಷೇತ್ರ ಇಲಾಖೆ:2)<br>8. **ಇ-ಆಡಳಿತ ಇಲಾಖೆ**: (ಇ-ಆಡಳಿತ ಸಚಿವಾಲಯ:1) (ಕ್ಷೇತ್ರ ಇಲಾಖೆ:2)<br>9. **ಮಾಹಿತಿ ತಂತ್ರಜ್ಞಾನ ಇಲಾಖೆ**: (ಮಾಹಿತಿ ತಂತ್ರಜ್ಞಾನ ಸಚಿವಾಲಯ:2) (ಕ್ಷೇತ್ರ ಇಲಾಖೆ:2) |

ವಿ.ಸೂ: 1. ಪೂರ್ವಾಹ್ನದ ತಂಡಕ್ಕೆ ಮಾತ್ರ ಅಪರಾಹ್ನ 1.15 ಗಂಟೆಗೆ ಅಲ್ಪೋಪಹಾರದ ವ್ಯವಸ್ಥೆ ಇರುತ್ತದೆ.

2. ತರಬೇತಿಗೆ ಹಾಜರಾಗುವ ಅಧಿಕಾರಿ:ನೌಕರರಿಗೆ ಹಾಜರಾತಿ ಪ್ರಮಾಣ ಪತ್ರ ನೀಡಲಾಗುವುದು. ಸಂಸ್ಥೆಯಿಂದ ಯಾವುದೇ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.

*****